ಇಲ್ಲದಿದ್ದು ಇದರಿಂದ ತೊಂದರೆಯಾಗುತ್ತಿರುವ ಸಂಗತಿ ಸರ್ಕಾರದವರ ಗಮನಕ್ಕೆ ಬಂದಿದೆಯೆ;

ಆ. ಹಾಗಿದ್ದಲ್ಲಿ ಇಲ್ಲಿ ಕ್ರೀಡಾಂಗಣ ನಿರ್ಮಿಸುವ ಯೋಜನೆ ಇದೆಯೆ;

ಇ. ಇದ್ದಲ್ಲಿ ಯಾವಾಗ ಆರಂಭಿಸುವಿರಿ ಮತ್ತು ಎಂದು ಪೂರ್ಣಗೊಳಿಸುವಿರಿ ?

ಶ್ರೀ ಹೆಚ್. ವಿಶ್ವನಾಥ್ (ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವಜನಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು):–

ಅ. ಹೌದು.

ಆ. ಇದೆ.

ಇ. ಕ್ರೀಡಾಂಗಣ ನಿರ್ಮಾಣಕ್ಕೆ ಸೂಕ್ತವಾದ ನಿವೇಶನವು ಲಭ್ಯವಾಗಿ ಇಲಾಖೆಗೆ ವರ್ಗಾಯಿಸಿದ ಕೂಡಲೇ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಲಾಗುವುದು.

ಚಲನಚಿತ್ರೋದ್ಯಮ ಅಭಿವೃದ್ಧಿಗೆ ವಿಶೇಷ ಯೋಜನೆ

1261 (1151): ಶ್ರೀ ಗುರುಪಾದಪ್ಪ ನಾಗ್ಮಾರಪಳ್ಳಿ (ಬೀದರ್):–

ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಕರ್ನಾಟಕದಲ್ಲಿ ಕನ್ನಡ ಚಲನಚಿತ್ರೋದ್ಯಮದ ಅಭಿವೃದ್ಧಿಗಾಗಿ ಸರ್ಕಾರ ವಿಶೇಷ ಯೋಜನೆಯನ್ನೇನಾದರೂ ರೂಪಿಸಿದೆಯೇ ? (ವಿವರಗಳನ್ನು ನೀಡುವುದು);

ಆ. ಸರ್ಕಾರವು ಹಮ್ಮಿಕೊಂಡಿರುವ 100 ದಿನಗಳ ಕಾರ್ಯಕ್ರಮಗಳಲ್ಲಿ ಕನ್ನಡ ಚಿತ್ರೋದ್ಯಮಕ್ಕೆ ಯಾವ ರೀತಿ ನೆರವಾಗುವುದು;

ಇ. ಪಕ್ಕದ ರಾಜ್ಯಗಳಲ್ಲಿ ಕನ್ನಡ ಚಿತ್ರ ಪ್ರದರ್ಶನಕ್ಕೆ ಮಾನ್ಯತೆ ದೊರೆಯುತ್ತಿಲ್ಲವಾದ ಕಾರಣ ರಾಜ್ಯದಲ್ಲಿಯೂ ಇತರ ಭಾಷಾ ಚಲನಚಿತ್ರ ಪ್ರದರ್ಶನಕ್ಕೆ ಕಡಿವಾಣ ಹಾಕುವುದರಿಂದ ಕನ್ನಡ ಚಿತ್ರೋದ್ಯಮ ಬೆಳೆಯಲು ನೆರವಾಗುವುದಿಲ್ಲವೇ;

ಈ. ಕನ್ನಡ ಚಲನಚಿತ್ರ ನಿರ್ಮಾಪಕರಿಗೆ ಸರ್ಕಾರವು ಸಬ್ಸಿಡಿ ಹಣವನ್ನು ನೀಡುವಲ್ಲಿ ತಡಮಾಡುತ್ತಿರುವುದೂ ಸಹ ಚಿತ್ರೋದ್ಯಮ ಬೆಳೆಯಲು ತೊಂದರೆಯಾಗುತ್ತಿದೆಯೇ ?

ಉ. ಕಳೆದ ವರ್ಷ ತಯಾರಿಸಲಾದ ಕನ್ನಡ ಚಲನಚಿತ್ರಗಳು ಯಾವುವು ? ಇವುಗಳಲ್ಲಿ ರೀಮೇಕ್ ಆದ ಚಲನಚಿತ್ರಗಳು ಯಾವುವು;

ಊ. ಕಳೆದ ವರ್ಷ ತಯಾರಿಸಲಾದ ಸಬ್ಸಿಡಿ ನೀಡಲಾಗಿರುವ ಚಲನಚಿತ್ರಗಳೆಷ್ಟು ? ಸಬ್ಸಿಡಿ ಬಾಕಿ ಇರುವ ಚಲನಚಿತ್ರಗಳ ಸಂಖ್ಯೆ ಎಷ್ಟು;

ಋ. ರೀಮೇಕ್ ಕನ್ನಡ ಚಿತ್ರಗಳಿಗೆ ಸಬ್ಸಿಡಿಯನ್ನು ನಿಲ್ಲಿಸುವ ಬಗ್ಗೆ ಸರ್ಕಾರ ಪರಿಶೀಲಿಸುತ್ತದೆಯೇ ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು):–

ಅ. ಹೌದು. ಸಹಾಯಧನ ಯೋಜನೆ, ಶೇಕಡಾ 50 ರಷ್ಟು ಮನರಂಜನಾ ತೆರಿಗೆ ವಿನಾಯಿತಿ, ಪ್ರಶಸ್ತಿಗಳು, ಚಿತ್ರೀಕರಣ ಶುಲ್ಕ ರಿಯಾಯ್ತಿ ಇವೆಲ್ಲವುಗಳನ್ನು ಜಾರಿಗೆ ತರಲಾಗಿದೆ.

ಆ. ನಿಯಮಾನುಸಾರ ಎಲ್ಲಾ ರೀತಿಯಲ್ಲೂ ನೆರವು ನೀಡಲಾಗುತ್ತಿದೆ.

ಇ. ಕಾನೂನು ರೀತ್ಯ ಅವಕಾಶವಿಲ್ಲ.

ಈ. ಸಹಾಯಧನವನ್ನು ಆಯಾ ಸಾಲಿನ ಅನುದಾನವನ್ನು ಆಧರಿಸಿ ಪಾವತಿ ಮಾಡಲಾಗುತ್ತಿದೆ. ಆದುದರಿಂದ ಚಲನಚಿತ್ರ ನಿರ್ಮಾಣಕ್ಕೆ ಧಕ್ಕೆ ಆಗಿಲ್ಲ.

ಉ. 1992ನೇ ವರ್ಷದಲ್ಲಿ ತಯಾರಾದ ಕನ್ನಡ ಚಲನಚಿತ್ರಗಳು 89. ಇವುಗಳಲ್ಲಿ ಪುನರಾವೃತ ಚಿತ್ರಗಳು 23. (ಪಟ್ಟಿಯನ್ನು ಲಗತ್ತಿಸಿದೆ).

ಊ. ಸಹಾಯಧನ ನೀಡಲಾದ ಚಿತ್ರಗಳು 16. ಸಹಾಯಧನ ಬಾಕಿ ಇರುವ ಚಿತ್ರಗಳು 57.

ಋ. ರೀಮೇಕ್ ಕನ್ನಡ ಚಿತ್ರಗಳಿಗೆ ಸಹಾಯಧನವನ್ನು ನೀಡಲಾಗುತ್ತಿಲ್ಲ.

1992ನೇ ಸಾಲಿನಲ್ಲಿ ಬಿಡುಗಡೆಯಾದ ಕನ್ನಡ ಚಿತ್ರಗಳ ಪಟ್ಟಿ

1. ಬೆಳ್ಳಿ ಕಾಲುಂಗುರ
2. ಬನ್ನಿ ಒಂದ್ಸಲ ನೋಡಿ
3. ಬೊಂಬಾಟ್ ಹೆಂಡ್ತಿ
4. ಅಮರ ಪ್ರೇಮ
5. ಹಟಮಾರಿ ಹೆಣ್ಣು ಕಿಲಾಡಿ ಗಂಡು
6. ಹೊಸರಾಗ
7. ಮಿಡಿದ ಶೃತಿ
8. ಕ್ರಾಂತಿ ಗಾಂಧಿ
9. ಚೈತ್ರದ ಪ್ರೇಮಾಂಜಲಿ
10. ಚಿತ್ರಲೇಖಾ
11. ಹೆಂಡ್ತಿರೇ ಹುಷಾರ್
12. ಶಿವನಾಗ
13. ಪುಟ್ಟ ಹೆಂಡ್ತಿ
14. ಪೃಥ್ವಿರಾಜ್
15. ಬೆಳ್ಳಿ ಮೊಡಗಳು
16. ಎಂಟೆದೆ ಭಂಟ
17. ಉಂಡು ಹೋದ ಕೊಂಡು ಹೋದ
18. ಸೆರಗು
19. ಸಿಂಧೂರ ತಿಲಕ
20. ಹಳ್ಳಿ ಮೇಷ್ಟ್ರು
21. ಕ್ಷೀರ ಸಾಗರ
22. ವಜ್ರಾಯುಧ
23. ರಾಜಾಧಿರಾಜ
24. ಗೂಂಡಾರಾಜ್ಯ
25. ಪುರುಷೋತ್ತಮ
26. ಮಾಲಾಶ್ರೀ ಮಾಮಾಶ್ರೀ

27. ಮೈಸೂರು ಜಾಣ
28. ಸೋಲಿಲ್ಲದ ಸರದಾರ
29. ಸಪ್ತಪದಿ
30. ಭಂಡ ನನ್ನ ಗಂಡ
31. ಮೈಸೂರು ಮಲ್ಲಿಗೆ
32. ನಗರದಲ್ಲಿ ನಾಯಕರು
33. ಎದುರುಮನೇಲಿ ಗಂಡ ಪಕ್ಕದ್ಮನೇಲಿ ಹೆಂಡ್ತಿ
34. ರವಿವರ್ಮ
35. ಗಣೇಶ ಸುಬ್ರಮಣ್ಯ
36. ಕನಸಿನ ರಾಣಿ
37. ತಲೆ ನನ್ನಮಗ
38. ಸಾಹಸಿ
39. ಗಿಳಿಬೇಟೆ
40. ಗೋಪಿಕೃಷ್ಣ
41. ಒಬ್ಬರಿಗಿಂತ ಒಬ್ಬರು
42. ನನ್ನ ತಂಗಿ
43. ಪೋಲೀಸ್ ಫೈಲ್
44. ಹೊಸಕಳ್ಳ ಹಳೇ ಕುಳ್ಳ
45. ಪ್ರೇಮ ಸಂಗಮ
46. ನಂಜುಂಡ
47. ಆತ್ಮಬಂಧನ
48. ಒಂದು ಸಿನಿಮಾ ಕಥೆ
49. ಜೀವನ ಚೈತ್ರ
50. ಮೇಘ ಮಂದಾರ
51. ಭಲೇ ಕೇಶವ
52. ಶಕ್ತಿಯುಕ್ತಿ
53. ಗೃಹಲಕ್ಷ್ಮಿ
54. ಗುರುಬ್ರಹ್ಮ
55. ಗಂಧರ್ವ
56. ರೋಷಗಾರ
57. ಬೆಳ್ಳಿಯಪ್ಪ ಬಂಗಾರಪ್ಪ
58. ಅಗ್ನಿಪಂಜರ
59. ಹಳ್ಳಿ ಕೃಷ್ಣ ಡೆಲ್ಲಿ ರಾಧ
60. ಕುಬಿ ಮತ್ತು ಇಯಾಲ
61. ಬಾ ನನ್ನ ಪ್ರೀತಿಸು
62. ಅಡ್ಜೆಸ್ಟ್‌ಮೆಂಟ್
63. ಸಮರ ಸಿಂಹ

64. ಪ್ರಣಯದ ಪಕ್ಷಿಗಳು
65. ಮನಗೆದ್ದಮಗ
66. ಸೂಪರ್ ನನ್ಮಗ
67. ಹರಕೆಯ ಕುರಿ
68. ಅಲ್ಲಿ ಇರೋದು ನೋಡಿ
69. ಸ್ನೇಹದ ಕಡಲಲ್ಲಿ
70. ಚಿಕ್ಕೆಜಮಾನ್ರು
71. ಮನಮೆಚ್ಚಿದ ಸೊಸೆ
72. ಸಂಗ್ಯಾ ಬಾಳ್ಯಾ
73. ಸೂರಿ
74. ಪೋಲೀಸ್ ಲಾಕಪ್
75. ಶಾಂಭವಿ
76. ಭರ್ಜರಿ ಗಂಡು
77. ಮಣ್ಣಿನ ದೋಣಿ
78. ಮರಣ ಮೃದಂಗ
79. ಅಲ್ಲಿ ರಾಮಾಚಾರಿ ಇಲ್ಲಿ ಬ್ರಹ್ಮಚಾರಿ
80. ಪ್ರಜೆಗಳು ಪ್ರಭುಗಳು
81. ಝೇಂಕಾರ
82. ಘರ್ಷಣೆ
83. ನನ್ನ ಶತ್ರು
84. ಅತಿಮಧುರ ಅನುರಾಗ
85. ಮಲ್ಲಿಗೆ ಹೂವೇ
86. ಶ್ರೀ ರಾಮಚಂದ್ರ
87. ಮಾವನಿಗೆ ತಕ್ಕ ಅಳಿಯ
88. ಕಲಿಯುಗ ಸೀತೆ
89. ಪ್ರೇಮದ ಉಯ್ಯಾಲೆ

1992ನೇ ಸಾಲಿನಲ್ಲಿ ಬಿಡುಗಡೆಯಾದ ರೀಮೇಕ್ ಕನ್ನಡ ಚಲನಚಿತ್ರಗಳ ಪಟ

1. ಬೊಂಬಾಟ್ ಹೆಂಡ್ತಿ
2. ಹಠಮಾರಿ ಹೆಣ್ಣು ಕಿಲಾಡಿ ಗಂಡು
3. ಹೆಂಡ್ತಿರೇ ಹುಷಾರ್
4. ಬೆಳ್ಳಿಮೋಡಗಳು
5. ಹಳ್ಳಿಮೇಷ್ಟ್ರು
6. ಸಿಂಧೂರ ತಿಲಕ
7. ಮಾಲಾಶ್ರೀ ಮಾಮಾಶ್ರೀ
8. ಎದುರು ಮನೇಲಿ ಗಂಡ ಪಕ್ಕದ್ಮನೇಲಿ ಹೆಂಡತಿ
9. ರವಿವರ್ಮ
10. ಗೋಪಿಕೃಷ್ಣ

11. ಆತ್ಮಬಂಧನ
12. ಗೃಹಲಕ್ಷ್ಮಿ
13. ಬೆಳ್ಳಿಯಪ್ಪ ಬಂಗಾರಪ್ಪ
14. ಹಳ್ಳಿಕೃಷ್ಣ ಡೆಲ್ಲಿ ರಾಧ
15. ಚಿಕ್ಕೆಜಮಾನ್ರು
16. ಸೂರಿ
17. ಝೇಂಕಾರ
18. ಘರ್ಷಣೆ
19. ನನ್ನ ಶತ್ರು
20. ಮಲ್ಲಿಗೆ ಹೂವೇ
21. ಶ್ರೀ ರಾಮಚಂದ್ರ
22. ಮಾವನಿಗೆ ತಕ್ಕ ಅಳಿಯ

ಕುಂದಾಪುರ ತಾಲ್ಲೂಕಿನ ಪೋಲೀಸ್ ಠಾಣೆಯ ಅಭಿವೃದ್ಧಿ

1262 (1931): ಶ್ರೀ ಜಿ.ಎನ್.ಆಚಾರ್ (ಬೈಂದೂರು):–

ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :

ಅ. ಕುಂದಾಪುರ ತಾಲ್ಲೂಕಿನಲ್ಲಿ ಸಾಕಷ್ಟು ಪೋಲೀಸ್ ಠಾಣೆಗಳಿಲ್ಲದಿರುವುದು ಮತ್ತು ಇರುವ ಠಾಣೆಗಳಲ್ಲಿ ಸಾಕಷ್ಟು ಸೌಕರ್ಯಗಳಿಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ. ಈ ಕೊರತೆಗಳನ್ನು ನೀಗಿಸಲು ಶಂಕರನಾರಾಯಣದಲ್ಲಿ ಹೊಸ ಪೋಲೀಸ್ ಠಾಣೆ ರಚಿಸುವುದು ಮತ್ತು ಬೈಂದೂರು ಠಾಣೆಗೆ ಒಂದು ಜೀಪು ಒದಗಿಸಲು ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು):–

ಅ. ಇಲ್ಲ.

ಆ. ಶಂಕರನಾರಾಯಣದಲ್ಲಿನ ಪೋಲೀಸ್ ಹೊರ ಠಾಣೆಯನ್ನು ಮೇಲ್ದರ್ಜೆಗೇರಿಸಿ, 1993-94ನೇ ಸಾಲಿನಲ್ಲಿ ಹೊಸ ಪೋಲೀಸ್ ಠಾಣೆಯೊಂದನ್ನು ಮಂಜೂರು ಮಾಡಲಾಗಿದೆ.

ಬೈಂದೂರಿಗೆ ಜೀಪನ್ನು ಕೊಡುವುದನ್ನು ಮುಂದಿನ ವರ್ಷಗಳಲ್ಲಿ ಪರಿಶೀಲಿಸಲಾಗುವುದು.

ಸಂಕಷ್ಟದಲ್ಲಿರುವ ಕಲಾವಿದರಿಗೆ ಮಾಸಾಶನ

1263 (1932): ಶ್ರೀ ಜಿ.ಎಸ್. ಆಚಾರ್ (ಬೈಂದೂರು):–

ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವಜನಸೇವಾ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯದಲ್ಲಿ ಸಂಕಷ್ಟದಲ್ಲಿರುವ ಕಲಾವಿದರಿಗೆ ಮಾಸಾಶನವನ್ನು ಎಷ್ಟು ಜನರಿಗೆ ನೀಡಲಾಗುತ್ತಿದೆ;

ಆ. ಹೊಸದಾಗಿ ಮಂಜೂರು ಮಾಡುವುದನ್ನು ಯಾವಾಗಿನಿಂದ ನಿಲ್ಲಿಸಲಾಯಿತು ಮತ್ತು ಏಕೆ;

ಇ. ಸಂತ್ರಸ್ತರಿಗೆ ಸಹಾಯ ನೀಡುವ ಕುರಿತು ಸರ್ಕಾರದ ಧೋರಣೆ ಏನು ?